# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** M/s Four EF Constructions ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 24.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಬಾಕಿ ಇರುವ 8.8 ಮೆ.ವ್ಯಾ ಸಾಮರ್ಥ್ಯದ ಯೋಜನೆಯ ಕಾಲಾವಕಾಶವನ್ನು ದಿನಾಂಕ: 31.12.2018 ರವರೆಗೆ ವಿಸ್ತರಿಸಿ, ಯೋಜನೆಯ ಹೆಸರನ್ನು M/s Four EF Renewables Private Limited ಎಂದು ಬದಲಾಯಿಸುವ ಬಗ್ಗೆ ಹಾಗೂ ಸದರಿ ಸಾಮರ್ಥ್ಯವನ್ನು 22 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ : ಇಎನ್ 326 ಎನ್‌ಸಿಇ 2006 ದಿನಾಂಕ : 28.01.2008.
2. ಸರ್ಕಾರದ ಆದೇಶ ಸಂಖ್ಯೆ : ಇಎನ್ 156 ಎನ್‌ಸಿಇ 2015 ದಿನಾಂಕ : 29.09.2015.
3. ಸರ್ಕಾರದ ಆದೇಶ ಸಂಖ್ಯೆ : ಇಎನ್ 15 ಎನ್‌ಸಿಇ 2016, ದಿನಾಂಕ : 14.01.2016
4. ಸರ್ಕಾರದ ಆದೇಶ ಸಂಖ್ಯೆ : ಇಎನ್ 15 ಎನ್‌ಸಿಇ 2016 ದಿನಾಂಕ : 18.01.2016 (10 ಮೆ.ವ್ಯಾ).
5. ಸರ್ಕಾರದ ಆದೇಶ ಸಂಖ್ಯೆ : ಇಎನ್ 15 ಎನ್‌ಸಿಇ 2016 ದಿನಾಂಕ : 18.01.2016 (6 ಮೆ.ವ್ಯಾ)
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಏಕ ಕಡತ ಸಂಖ್ಯೆ: 464–R

* * *

**ಪ್ರಸ್ತಾವನೆ:–**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರದ ಆದೇಶದನ್ವಯ M/s Reliable Wind Energy ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರಾಮಜೋಗಿಹಳ್ಳಿ, ಮುಚ್ಚುಕುಂಟೆ ಮತ್ತು ಬಾಳೇನಹಳ್ಳಿ ಗ್ರಾಮಗಳಲ್ಲಿ 12.75 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಲ್ಲಿ M/s Reliable Wind Energy ಕಂಪನಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಹಂಚಿಕೆಯಾದ 12.75 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಹೆಸರನ್ನು M/s Four EF Constructions ಎಂದು ಬದಲಾಯಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಸರ್ಕಾರದ ಆದೇಶದಲ್ಲಿ M/s Four EF Constructions ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ರಾಮಜೋಗಿಹಳ್ಳಿ, ಮಚ್ಚುಕುಂಟೆ ಮತ್ತು ಬಾಳೇನಹಳ್ಳಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 12.75 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು 24.80 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಿ, ಸದರಿ ಸಾಮರ್ಥ್ಯವನ್ನು ದಿನಾಂಕ: 31.03.2017 ರೊಳಗೆ ಅನುಷ್ಠಾನಗೊಳಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ಮತ್ತು (5) ರ ಸರ್ಕಾರದ ಆದೇಶಗಳಲ್ಲಿ M/s Four EF Constructions ಕಂಪನಿಗೆ ಹಂಚಿಕೆಯಾಗಿರುವ 24.80 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 10 ಮೆ.ವ್ಯಾ ಸಾಮರ್ಥ್ಯದ ಯೋಜನೆಯನ್ನು M/s Fiza Developers & Infrastructure Private Limited ಕಂಪನಿಗೆ ಮತ್ತು 6 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Four EF Wind Power Private Limited ಕಂಪನಿಗೆ ವರ್ಗಾಯಿಸಿ ಆದೇಶಿಸಲಾಗಿದೆ.

...2)

ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಏಕ ಕಡತ ಪದ್ಧತಿಯಲ್ಲಿ M/s Four EF Constructions ಕಂಪನಿಗೆ ಚಿತ್ರದುರ್ಗ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 24.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ ಬಾಕಿ ಇರುವ 8.8 ಮೆ.ವ್ಯಾ ಸಾಮರ್ಥ್ಯದ ಯೋಜನೆಯನ್ನು ದಿನಾಂಕ: 31.12.2018 ರವರೆಗೆ ಕಾಲಾವಕಾಶವನ್ನು ವಿಸ್ತರಿಸಿ, ಯೋಜನೆಯ ಹೆಸರನ್ನು M/s Four EF Renewables Private Limited ಎಂದು ಬದಲಾಯಿಸಲು ಹಾಗೂ M/s Four EF Renewables Private Limited ಕಂಪನಿಯ 8.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 22 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ ಕೋರಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು ಎರಡು ಕಂಪನಿಗಳು Government of India Ministry of Corporate Affairs, Registrar of Companies, Bangalore, ಇಲ್ಲಿ ಹೆಸರು ಬದಲಾಯಿಸಿರುವುದಕ್ಕೆ ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿದ್ದು, ಎರಡು ಕಂಪನಿಗಳ CIN No. U45500KA2017PTC108793 ಒಂದೇ ಆಗಿರುತ್ತದೆ ಹಾಗೂ ಯೋಜನೆಗೆ ಸಂಬಂಧಿಸಿದ ಅಕ್ಷಾಂಶ ಮತ್ತು ರೇಖಾಂಶ, ತಾಂತ್ರಿಕ ವಿವರಗಳು ಹಾಗೂ ಸ್ಥಳದ ಮಾಹಿತಿಯ ವಿವರಗಳನ್ನು ಸಲ್ಲಿಸುತ್ತಾ, M/s Four EF Renewables Private Limited ಕಂಪನಿಗೆ ಹಂಚಿಕೆ ಮಾಡಲಾದ 8.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಶೆಡ್ಯೂಲ್‌ನಲಿರುವಂತೆ 22 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸಲು ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕ್ರೆಡಲ್ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**Geographical area description for 22 MW capacity Wind Power Project of M/s Four EF Renewables Private Limited**

| Sl. No | Geographical area description of the Project | Near by villages of the proposed area and district | Balance capacity available in the Sanctioned capacity in MW | Enhancement proposed in MW | Toal capacity in MW |
|---|---|---|---|---|---|
| 1 | A NW-SE oriented non-contigious ridges are located on the North-West of Balenahalli Village and are having open scrub features with two peaks are held in the following Geographical co-ordinates as:<br>Latitude: 14°15'0''- 14°16'50''N<br>Longitude : 76°31'48''- 76°32'53''E<br>Peaks : 681, 729m Amsl.<br>Toposheet No : 57 B /11 | Ramajogihalli, Mucchukunte and Balenahalli Villages of Chitradurga District | 8.8 MW | 13.2 MW | 22 MW (11 Nos x 2000 kw) |

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 223 ಎನ್‌ಸಿಇ 2018, ಬೆಂಗಳೂರು, ದಿನಾಂಕ: 24.05.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ : ಇಎನ್ 15 ಎನ್‌ಸಿಇ 2016 ದಿನಾಂಕ : 14.01.2016 ರನ್ವಯ M/s Four EF Constructions ಕಂಪನಿಗೆ ಹಂಚಿಕೆಯಾಗಿರುವ 24.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಪೈಕಿ ವರ್ಗಾವಣೆ ನಂತರ ಬಾಕಿ ಉಳಿದಿರುವ 8.8 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ದಿನಾಂಕ: 31.12.2018 ರವರೆಗೆ ಕಾಲಾವಕಾಶವನ್ನು ವಿಸ್ತರಿಸಿ ಸದರಿ ಯೋಜನೆಯ ಹೆಸರನ್ನು M/s Four EF Renewables Private Limited ಎಂದು ಬದಲಾಯಿಸಿ ಆದೇಶಿಸಿದೆ.

...3)